Regd. No M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30. ಸಂಚಿಕೆ 267 | ಬುಧವಾರ 18—6—47 | ಬಿಡಿ ಪ್ರತಿ 6 ಪೈ

ಭಾರತದ ಹಣ ಮುಳುಗುವದೇ ?

ಕಳೆದ ಮಹಾಯುದ್ಧ ಕಾಲದಲ್ಲಿ ಭಾರತವು ಬ್ರಿಟನ್ನಿಗೆ ನೀಡಿದ ಧನ ಸಹಾಯವು ಅದನ್ನು ಶತ್ರುಗಳಿಂದ ಉಳಿಸಲು ಬಹುಮಟ್ಟಿಗೆ ಸಹಾಯವಾಯಿತೆಂಬ ಮಾತು ನಿರ್ವಿವಾದವಾದುದು. ಇಂಗ್ಲೆಂಡವು ಭಾರತಕ್ಕೆ 1200ದಶ ಲಕ್ಷ ಪೌಂಡುಗಳ ಸಾಲವನ್ನು ಮುಟ್ಟಿಸಬೇಕಾಗಿದೆ. ಹೊಟ್ಟೆಗಿಲ್ಲದೆ ಬಳಲುತ್ತಿರುವ ಭಾರತದ ಬಡ ಪ್ರಜೆಗಳು ಈ ಅಪಾರವಾದ ಹಣವನ್ನು ಬ್ರಿಟಿಷರಿಗೆ ಅವರ ಕಷ್ಟಕಾಲದಲ್ಲಿ ಕೊಟ್ಟಿದ್ದಾರೆ ಕೊಟ್ಟಿದ್ದಾರೆ ಎನ್ನುವದಕ್ಕಿಂತಲೂ ಬ್ರಿಟಿಷರು ತಮಗಿರುವ ಅಧಿಕಾರ ಬಲದಿಂದ ಅದನ್ನು ಪಡೆದರು ಎಂದು ಹೇಳುವದು ಹೆಚ್ಚು ಯೋಗ್ಯವಾಗಬಹುದು. ಲಾರ್ಡ್ ಕೇನ್ಸ್ ಮೊದಲಾದ ಬ್ರಿಟಿಷ ಪ್ರತಿನಿಧಿಗಳು ಬ್ರಿಟನ್ನವು ಈ ಸಾಲವನ್ನು ಪೈಗೆ ಪೈ ಮುಟ್ಟಿಸುವದು ಎಂದು ಹೇಳಿದ್ದರು. ಆದರೆ ಡಾ॥ ಡಾಲ್ಟನ್ನರು ಈ ಸಾಲವು ಅನ್ಯಾಯುದ್ದೂ ಅವ್ಯವಹಾರ್ಯವೂ ಆಗಿದೆಯೆಂದೂ ಅಷ್ಟೊಂದು ಹಣವನ್ನು ತಿರುಗಿ ಮುಟ್ಟಿಸುವದು ಸಾಧ್ಯವಿಲ್ಲವೆಂದೂ, ಸಾಲದ ಹಣವನ್ನು ಕಡಿಮೆ ಮಾಡಬೇಕೆಂದೂ ಕಾಮನ್ಸ್ ಸಭೆಯಲ್ಲಿ ಹೇಳಿದ್ದಾರೆ.

ಹಿಂದೀಯರ ಸತ್ಯಾಗ್ರಹ

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರು ಫೆಬ್ರುವರಿ ಕಾಯಿದೆ ವಿರುದ್ಧ ಸತ್ಯಾಗ್ರಹ ಪ್ರಾರಂಭವಾಡಿ ಒಂದು ವರ್ಷವಾದ್ದರಿಂದ ಮುಖ್ಯಮುಖ್ಯ ಪಟ್ಟಣಗಳಲ್ಲೂ ಸತ್ಯಾಗ್ರಹ ದಿನವನ್ನಾಚರಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ ಈ ಕಾಯಿದೆ ಮುರಿದು 1710 ಸತ್ಯಾಗ್ರಹಿಗಳು ಜೈಲಿಗೆ ಹೋಗಿದ್ದು ಅವರಿಗೆ ಎಧಿಸಲಾದ ಒಟ್ಟು ಶಿಕ್ಷೆಯು 2218 ತಿಂಗಳಾಗುವದು.

ಸಿಂಗಾಪುರದಲ್ಲಿ ಸುಭಾಸರ ಸ್ಮಾರಕ

ಸಿಂಗಾಪುರದಲ್ಲಿ ನೇತಾಜಿ ಸುಭಾಸ ಚಂದ್ರರಿಗೊಂದು ಸ್ಮಾರಕವನ್ನು 500000 ಸ್ಟ್ರೈಟ್ಸ್ ಡಾಲರ್ ಖರ್ಚು ಮಾಡಿ ಕಟ್ಟಿಸಬೇಕೆಂದು ಮಲಯದ ಹಿಂದೀಯರು ಯೋಚಿಸಿದ್ದಾರೆ. ಈ ಬಗ್ಗೆ ನಿಧಿ ಸಂಗ್ರಹಿಸುವ ನಿರ್ಣಯವು ಕುವಾಲಾ ಲಂಪರ್‌ದಲ್ಲಿ ಜರಗಿದ ಮಲಯ ಹಿಂದೀಯ ಕಾಂಗ್ರೆಸ್ ಅಧಿವೇಶನದಲ್ಲಿ ಆಗಿದ್ದೆ, ಮಾತ್ರವಲ್ಲ ಒಡನೆ 6000 ಡಾಲರ್‌ಗಳು ಸಂಗ್ರಹವಾಗಿದೆ.

'ರೆಫರೆಂಡಂ' ಗೆ ಕಾಂಗ್ರೆಸ್ ಮತ್ತು ರಕ್ತಅಂಗಿಯವರ ಬಹಿಷ್ಕಾರ

ನವದೆಹಲಿ ಜೂ॥ 16 — ಗಡಿನಾಡು ಕಾಂಗ್ರೆಸ್ ಮತ್ತು ಖಕ್ಕ ಅಂಗೀ ನಾಯಕರು ಬರಲಿರುವ ವಾಯುವ್ಯ ಸರಹದ್ದು ಪ್ರಾಂತ್ಯ 'ರೆಫರೆಂಡಂ' (ಮತ ಸಂಗ್ರಹ) ದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಲಾಗಿದೆ.

ಮತ ಸಂಗ್ರಹವನ್ನು ಬಹಿಷ್ಕರಿಸುವ್ರ ಪ್ರಥಮ ಕಾರಣ, ವಯಸ್ಕ ಪ್ರಾತಿನಿಧ್ಯವಿಲ್ಲದಿರುವುದು ದ್ವಿತೀಯ ಕಾರಣವೆಂದರೆ ಜೂ॥ 3 ರ ಬ್ರಿಟೀಷ್ ಹೇಳಿಕೆ ಪ್ರಕಾರ 'ಪಠಾಣ ಸ್ಥಾನ' ಒಪ್ಪುವುದು.

ಆಹ್ವಾನ ಪತ್ರಿಕೆ

ಬೆಂಗಳೂರು ಜೂ॥ 17 — ಆಹ್ವಾನ ಪತ್ರಿಕೆಗಳು ಇಷ್ಟೇ ಅಳತೆಗೆ ಹೆಚ್ಚಿಲ್ಲದಂತೆ ಮುದ್ರಣವಾಗತಕ್ಕದೆಂದೂ, ಪೇಪರ್ ಕಂಟ್ರೋಲು ಆರ್ಡರಿನಲ್ಲಿದ್ದ ನಿಬಂಧನೆಯು ತೆಗೆಯಲಾಗಿದೆ.

ಸಿಲ್ಹೆಟ್‌ನಲ್ಲಿ ಮತಸಂಗ್ರಹ

ನವದೆಹಲಿ ಜೂ॥ 16 — ಜುಲೈ ತಿಂಗಳಲ್ಲಿ ಸಿಲ್ಹೆಟ್‌ನಲ್ಲಿ ಮತ ಸಂಗ್ರಹ ನಡೆಯಲಿದೆ.

———

ತಿರುಚ್ಚನಾಪಳ್ಳಿ ಜೂ॥ 16 — ದ್ರಾವಿಡ ಸ್ಥಾನವನ್ನು ನಿರ್ಮಿಸಿ, ಆದರಲ್ಲಿ ತಮಿಳುನಾಡು, ಆಂಧ್ರ ದೇಶ ಕರ್ನಾಟಕ ಕೇಂದ್ರಗಳನ್ನು ಸೇರಿಸದಿದ್ದರೆ ಚಳುವಳಿ ಮಾಡಲಾಗುವುದೆಂದು ಇಲ್ಲಿ ನಡೆದ ದ್ರಾವಿಡ ಸ್ಥಾನ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿದೆ.

ಸಿ. ಆಗ್. ಗೌರ್ನರ್ ಆಗುವರೆ ?

ನವದೆಹಲಿ ಜೂ॥ 16 — ಆಗಸ್ಟ್ 15 ರ ನಂತರ ಭಾರತಕ್ಕೆ ಡೊಮೀನಿಯನ್ ಸ್ಥಾನವೂನ ದೊರೆತನಂತರ ಭಾರತ ಪ್ರಾಂತ್ಯಗಳಿಗೆ ಗೌರ್ನರುಗಳನ್ನು ನೇಮಿಸಲು ಪಟ್ಟಿಯನ್ನು ಕೊಡಿರಿ ಎಂದು ಪಂ॥ ನೆಹರು ಮತ್ತು ಜಿನ್ನಾ ಕೇಳಿಕೊಳ್ಳಲಾಗಿದೆ

ಶ್ರೀ ಸಿ. ರಾಜಗೋಪಾಲಚಾರಿ, ಶ್ರೀ ಬಾಬಾ ಸರ್ ರಾವ್ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ನ್ಯಾ॥ ರಾವ-ಲಾಲ್ ಇವರು ಕಾಂಗ್ರೆಸ್ ಪಟ್ಟಿಯಲ್ಲಿದ್ದಾರೆ:

ಲಂಡನ್ ಜೂ॥ 16 — ಪಾಕೀ ಸ್ಥಾನ ಬ್ರಿಟೀಷ್ ಸಂಸ್ಥೆಗಳನ್ನು ಹಿಂದೂಸ್ಥಾನಕ್ಕಿಂತ ಹೆಚ್ಚು ಕೊಳ್ಳುತ್ತದೆ. ಕಚ್ಚಾ ಪದಾರ್ಥಗಳನ್ನು ಬ್ರಿಟನ್ನಿಗೆ ಹೆಚ್ಚು ರಫ್ತು ಮಾಡುತ್ತದೆ ಎಂದು ಮುಸ್ಲಿಂ ವಾಣಿಜ್ಯ ಸಂಘದ ಆವರಣದಿಂದ ಕೇಳಿ ಬರುತ್ತಿದೆ.

ಲಾಹೋರ್ ಜೂ॥ 16 — ಲಾಹೋರಿನಲ್ಲಿ ಈ ದಿವಸ ಕೋಮು ಗಲಭೆ ಎದ್ದಿತು. ನಗರದ ನಾನಾ ಭಾಗಗಳಲ್ಲಿ ಅರ್ಧ ಡಜ಼ನ್ ಬಾಂಬುಗಳು ಸಿಡಿದವು. ಪಾಹಾರ್ಲಿದ್ವಾರದ ಹೊರ ಭಾಗದಲ್ಲಿರುವ ಆಸ್ಪತ್ರೆ ಬಳಿ ತೀವ್ರ ಅಸ್ಫೋಟನೆ ಜರುಗಿ 46 ಮಂದಿ ಗಾಯಗೊಂಡರು. ಮೂವರು ಸ್ಥಿತಿ ಚಿಂತಾಜನಕ. ಡೆಪ್ಯುಟಿ ಪೋಲೀಸ್ ಸೂಪರಿಂಡೆಂಟರಿಗೆ ಗಾಯವಾಗಿದೆ.

29 ರಲ್ಲಿ ಸಂಯುಕ್ತ ಅಧಿವೇಶನವೆ ?

ಬೆಂಗಳೂರು ಜೂ॥ 17

ಇದೇ ತಾ॥ 29 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವುಗಳ ಸಂಯುಕ್ತ ಅಧಿವೇಶನ ಸೇರಿ ಭಾರತ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಲಾಗುವುದು — ಎಂದು ಬಹಳ ಪ್ರಬಲವಾದ ವದಂತಿಯೆದ್ದಿದೆ.

ರಾಜ್ಯಾಂಗ ಸಭೆಗೆ ಮೈಸೂರು ಭಾಗಿಯಾಗುವುದು ಎಂದು ದಿವಾನ್ ಶ್ರೀ ಹೇಬರು ಪತ್ರಿಕಾಗೋಷ್ಠಿಯಲ್ಲಿ ಅರುಹಿದ ವಿಷಯ ಸಂಸ್ಥಾನಾದ್ಯಂತ ಅನಂದಗೊಳಿಸಿದೆ. ದಿವಾನರವರ ನಾಯಕತ್ವದಲ್ಲಿ ಮೈಸೂರು ರಾಜ್ಯಾಂಗ ಸಭೆಯನ್ನು ಪ್ರವೇಶಿಸಿ ಮೈಸೂರು ಪ್ರಗತಿ ಪಥದಲ್ಲಿ ಮುಂಚುವರೆಯಲಿ ಎಂದು ಇಡೀ ದೇಶವೇ ಹಾರೈಸುತ್ತಿದೆ.

ಖಾನ್ ಸಾಹೇಬ್ ಸರ್ಕಾರ ರಾಜೀನಾಮೆ ಕೊಡುವುದೇ

ನವದೆಹಲಿ ಜೂ॥ 16

ಗಡಿನಾಡಿನಲ್ಲಿ ಮತಸಂಗ್ರಹದಿಂದ ರಕ್ತಪಾತ ಮತ್ತು ದೌರ್ಜನ್ಯಗಳು ನಡೆಯುವುದೆಂದು ಗಾಂಧೀಜಿ ಹೆದರಿದ್ದಾರೆ. ಕಾಂಗ್ರೆಸ್ ಕಾರ್ಯ ಸಮಿತಿ ಮತ್ತು ಲೀಗ್ ಒಪ್ಪಂದವೇರ್ಪಟ್ಟರೂ, ಅದು ಶಾಂತಿಪೂರ್ಣವಾಗಿ ನಡೆಯಲಿ ಎಂಬುದೇ ಗಾಂಧೀಜಿಯವರ ಇಚ್ಛೆ. ಮತ ಸಂಗ್ರಹ ತಪ್ಪಿಸಲು ಕಾಂಗ್ರೆಸ್ ಕಾರ್ಯ ಸಮಿತಿ ಉದ್ದೇಶಪೂರ್ವಕವಾಗಿ ಖಾನ್ ಸಾಹೇಬ್ ಸರ್ಕಾರ ರಾಜೀನಾಮೆ ಕೊಡಬಹುದು ಎಂದು ರಾಜಕೀಯ ಆವರಣದಿಂದ ಹೊರ ಬಿದ್ದ ಸುದ್ದಿ. ಇದು ಬ್ರಿಟೀಷ್ ಸರ್ಕಾರಕ್ಕೆ ಒಪ್ಪಿಗೆಯೋ ನಿರ್ಲಕ್ಷ್ಯವೋ ಹೇಳಲಸಾಧ್ಯ !

ಹೊಲಿವುಡ್ ಚಿತ್ರಕ್ಕೆ ಸಂಯುಕ್ತ ಪ್ರಾಂತದಲ್ಲಿ ಬಹಿಷ್ಕಾರ

ಹೊಲಿವುಡ್‌ದಲ್ಲಿ ತಯಾರಾದ ಯುನೈಟೆಡ್ ಆರ್ಟಿಸ್ಟ್‌ದವರ 'ಸ್ಟ್ರೇಂಜ್ ವಿಮೆನ್' ಎಂಬ ಚಿತ್ರ ಪ್ರದರ್ಶನ ಸಂಯುಕ್ತ ಪ್ರಾಂತದಲ್ಲಿ ಕೂಡದೆಂದು ಅಲ್ಲಿಯ ಸರಕಾರ ಬಹಿಷ್ಕಾರ ಹಾಕಿದುವುದು.

———

ಭಾರತ ಮಂತ್ರಿಗಳಾದ ಲಾರ್ಡ್ ಲಿ ಸ್ಟೊವೆಲ್ಲರು ಅಧಿಕಾರ ದಾನ ಸಮಾರಂಭಕ್ಕಾಗಿ ಆಗಸ್ಟ್ ತಿಂಗಳಲ್ಲಿ ಹಿಂದು ಸ್ಥಾನಕ್ಕೆ ಬರಲಿರುವರಂತೆ.

ಆಂಡಮಾನಿನ ಹಿಂದೂಸ್ಥಾನದ್ದು

ಬ್ರಿಟಿಷ್ ಸರಕಾರದವರಲ್ಲಿ ಭಾರತವನ್ನು ಬಿಟ್ಟುಹೋಗುವ ಸಿದ್ಧತೆಯನ್ನು ಮಾಡುತ್ತಿದ್ದಂತೆಗೆ, ಆಂಡಮಾನ್ ಮತ್ತು ನಿಕೋಬಾರ ನಡುಗಡ್ಡೆಗಳು ಬ್ರಿಟಿಷ್ ಸರಕಾರಕ್ಕೆ ಉಪಯೋಗ ಭಾವನೆ ಮಾಡಲು ಕೊಡಲ್ಪಡುವುದೆಂದು ವಿಶ್ವಸನೀಯವಾಗಿ ವಾರ್ತೆಯು ಹಬ್ಬುತ್ತಿದೆ. ಇದೊಂದು ಆಶ್ಚರ್ಯದ ಸಂಗತಿಯು. ಈ ನಡುಗಡ್ಡೆಗಳು ಮೊದಲಿನಿಂದ ಹಿಂದೂಸ್ಥಾನದವು. 1945 ರ ಹಿಂದೀ ರಾಜ್ಯ ಘಟನೆಯು ಕಾಯಿದೆಪುಸ್ತಕವು ಈ ನಡುಗಡ್ಡೆಗಳು ಅಜಮಿಂರ, ಮೇವಾಡ ಕಾಶ್ಮೀರದಂತೆ ಕವಿಾಷನರ ಪ್ರಾಂತ್ಯಗಳೆಂದು ರಾಜಕಾರಭಾರನಡೆಯಬೇಕೆಂದು ಗೊತ್ತಾಗಿದೆ. ಹಿಂದೀ ರಾಜಖೈದಿ ಮತ್ತು ರಾಜಬಂದಿಗಳ ವಸಾಹತನೆಂದು ಈ ನಡುಗಡ್ಡೆಗಳು ಹಿಂದೀ ಸ್ವಾತಂತ್ರ್ಯದ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಯುದ್ಧ ಮುಗಿದು ಅವು ಪುನಃ ಜಪಾನರ ಕೈಯಿಂದ ತೆಗೆದುಕೊಂಡ ನಂತರ ಹಿಂದೀಜನರು ಅಲ್ಲಿ ಖಾಯಂ ವಸತಿ ಮಾಡಿಕ್ಕೊಳ್ಳಲು ಹೋಗಬೇಕು. ಮತ್ತು ಅಲ್ಲಿಯ ಕಟ್ಟಿಗೆ ಹಾಗೂ ವಿಮಾನುಗಾವಿಕೆಯು ವ್ಯಾಪಾರೋದ್ಯೋಗವನ್ನು ಹೆಚ್ಚಿಸಬೇಕು ಎಂದು, ಸರ್ಕಾರದವರು ಪತ್ರಿಕಾಗಳನ್ನು ಕೇಳಿದ್ದಾರು, ಹಾಗೂ ಪ್ರಥಮಕ್ಕೆ ಸೂಚಿಸಲಾಗಿತ್ತು. ಹೀಗಿದ್ದು ಇನ್ನೇಲೇ ಈಗ ಈ ನಡುಗಡ್ಡೆಗಳನ್ನು ಬ್ರಿಟಿಷ್ ಸರಕಾರಕ್ಕೆ ಉಪಯೋಗಿಸುವರೆಂದರೆ ವಿಚಿತ್ರ ಸಂಗತಿಯು. ಸಿಂಹಳ ದ್ವೀಪದಲ್ಲಿ ತ್ರಿಂಕಾಮಲಿ ಬಂದರನ್ನು ಬ್ರಿಟಿಷ್ ಭಾವನೆಯಾಗಿದೆ. ಆದಕ್ಕೆ ಜೋಡಿಸಿಯೆಂದು ಅಂದಮಾನ್ – ನಿಕೋಬಾರ್ ನಡುಗಡ್ಡೆಗಳನ್ನು ಕೊಡುವುದು ಯೋಗ್ಯವಲ್ಲ. ಸ್ವತಂತ್ರ ಹಿಂದೂಸ್ಥಾನ ಮತ್ತು ಬ್ರಹ್ಮದೇಶ ಇವುಗಳ ಮಧ್ಯದಲ್ಲಿ ಬ್ರಿಟಿಷ್ ಲಷ್ಕರೀ ಭಾವನೆಯನ್ನು ಈ ನಡುಗಡ್ಡೆಗಳಲ್ಲಿ ಪ್ರಸ್ಥಾಪಿಸುವುದೆಂದರೆ ಇದು ಬ್ರಿಟಿಷರ ಸಮಿಪ್ಯಯ ಚಿನ್ಹವಲ್ಲ. ಬ್ರಿಟಿಷ್ ಸಾಮ್ರಾಜ್ಯವಾಹಿಯ ಅದೊಂದು ಸ್ಮಶೀಕವೆಂದು ಗಣಿಸಲ್ಪಡುವುದು. ಆದಕ್ಕಾಗಿ ಈ ಮಹತ್ವದ ಪ್ರಶ್ನೆಯ ಬಗ್ಗೆ ನಡುಗಾಲು ಸರಕಾರದವರು ವಿಚಾರಮಾಡುವ ಮಾತಾಗಿದೆಯೆಂದು ಹೇಳಲಾಗಿದೆ. (ಸಂ)

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆಣಾ ೫

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

OFFICE OF THE PRESIDENT
CITY MUNICIPAL COUNCIL
MYSORE, 9th June 1947

Notification

JUST RELEASED FROM THE PRESS

Municipal Handbook & Diary

(From 1 st March 47 to end of March 48)

A publication which should be in the hands of all the citizens of Mysore.

A publication which gives full particulars pertaining to the Municipality and also contains Diary for 12 months.

Price : **Annas Twelve only** (As. 12)

For Copies please apply to—

The President

At Opera 9th Glorious Week

RAJAKUMARI

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾ ಜ ಕು ಮಾ ರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೈಯಿಂದ ಆರಿಸಲ್ಪಟ್ಟ ಹೂಗಳಿಂದ ತಿಕ್ಕಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದ್ದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂಡಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

"ರಾಜಕುಮಾರಿಯು" ಒಂದು ದೃಶ್ಯ

Edited, Printed and Published by M. S Krishna Rao at th Satyvadi Press Chamara Agrahar, Mysore.